2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 105/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಹಾದೇವಿ | ಪಿಡಬ್ಲೂ - 4 |
| ಗಂಡನ ಹೆಸರು | - | ನಿಂಗರಾಜು | ಸಿಡಬ್ಲೂ - 4 |
| ವಯಸ್ಸು | - | 38 ವರ್ಷ | |
| ಉದ್ಯೋಗ | - | ಕೂಲಿ ಕೆಲಸ | |
| ವಾಸ ಸ್ಥಳ | - | ಬುಕ್ಕಾಂಬುಧಿ | |

ದಿನಾಂಕಃ 27.07.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತು. ಅವರು ನಮ್ಮ ಊರಿನವರು. ಚಾಸಾ.1, ಚಾಸಾ.9 ಮತ್ತು ಚಾಸಾ.10 ರವರು ಗೊತ್ತಿಲ್ಲ. ಚಾಸಾ.2, 3, 5 ರಿಂದ ಚಾಸಾ.8 ರವರು ಗೊತ್ತು. ಅವರು ನಮ್ಮ ಊರಿನವರು. ಮೃತೆ ಲತಾ ಗೊತ್ತು. ಆಕೆ 1 ನೇ ಆರೋಪಿಯ ಹೆಂಡತಿ.

2. ಲತಾ ಮೃತ ಪಟ್ಟಿದ್ದಾಳೆ ಆದರೆ ಯಾವಾಗ ಎಂದು ನಾನು ನೆನಪಿಟ್ಟುಕೊಂಡಿಲ್ಲ. ನಾನು ಆಕೆಯ ಶವವನ್ನು ನೋಡಿಲ್ಲ. ಆಕೆ ಎಲ್ಲಿ, ಹೇಗೆ, ಯಾವ ಕಾರಣಕ್ಕೆ ಯಾರಿಂದ ಮೃತಪಟ್ಟಿದ್ದಾಳೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಲತಾ ಮೃತಪಟ್ಟಿದ್ದ ಸಮಯದಲ್ಲಿ ನನ್ನನ್ನು ವಿಚಾರಿಸಿದ್ದಾರೆ ಆಗ ನಾನು ಅವರಿಗೆ ಯಾವುದೇ ಮಾಹಿತಿ ಇಲ್ಲವೆಂದು ತಿಳಿಸಿದ್ದೇನೆ.

3. ಸಾಕ್ಷಿಯು ಈಗಾಗಲೇ ನಿಪಿ.2, 3, 4, 5, 9 ಮತ್ತು 10 ಎಂದು ಗುರುತಿಸಲಾಗಿರುವ ಫೋಟೋಗಳಲ್ಲಿ ಲತಾಳ ಮೃತ ದೇಹವಿದೆ ಎಂದು ನುಡಿದಿರುತ್ತಾರೆ. ಲತಾಳ ಸಾವಿಗೆ ಯಾರು ಕಾರಣರೆಂದು ನನಗೆ ಗೊತ್ತಿಲ್ಲ.

4. ಆರೋಪಿ ಮೃತಳಿಗೆ ಏನು ತೊಂದರೆ ಮಾಡಿದ್ದಾನೆ ಎಂದು ನನಗೆ ಗೊತ್ತಿಲ್ಲ. ಆರೋಪಿತರ ವಿರುದ್ಧ ದೂರು ದಾಖಲಾಗಿರುವ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

5. ನಮ್ಮ ಕಾಲೋನಿಯಲ್ಲಿ ನಮ್ಮ ಮನೆಯ ಪಕ್ಕದಲ್ಲಿ 1 ರಿಂದ 4 ನೇ ಆರೋಪಿತರು ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಶಿವನಿಯಲ್ಲಿ ವಾಸವಾಗಿದ್ದರು ಮತ್ತು ಮೃತೆ ಲತಾ ನಮ್ಮ ಮನೆಯ ಪಕ್ಕದಲ್ಲಿ ಇದ್ದ ಆರೋಪಿತರ ಮನೆಯಲ್ಲಿ ವಾಸವಾಗಿದ್ದಳು ಎನ್ನುತ್ತಾರೆ. 1 ನೇ ಆರೋಪಿ ಘಟನೆಯ 4-5 ತಿಂಗಳ ಹಿಂದೆ ಲತಾಳನ್ನು ಮದುವೆ ಮಾಡಿಕೊಂಡು ಬಂದಿದ್ದನ್ನು ಮತ್ತು ಆ ವಿಚಾರವನ್ನು ಯಾರಿಗೂ ಹೇಳಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಲತಾಳನ್ನು ಮದುವೆ ಮಾಡಿಕೊಂಡು ಬಂದು 2 ಮತ್ತು 3 ನೇ ಆರೋಪಿತರು ವಾಸವಾಗಿದ್ದ ಮನೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ. ಮದುವೆ ಮಾಡಿಕೊಂಡು

ಬಂದ 1 ತಿಂಗಳ ಬಳಿಕ 2 ಮತ್ತು 3 ನೇ ಆರೋಪಿತರು ಲತಾಳೊಂದಿಗೆ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಗಳದ ಬಗ್ಗೆ ಲತಾ ಮತ್ತು 2 ನೇ ಆರೋಪಿಗೆ ಮನಸ್ತಾಪವಾಗಿ 2 ಮತ್ತು 3 ನೇ ಆರೋಪಿತರು ಮನೆಯನ್ನು ಖಾಲಿ ಮಾಡಿಕೊಂಡು ಘಟನೆಯ 2 ತಿಂಗಳ ಹಿಂದೆ ಶಿವನಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿರುತ್ತಾರೆ ಎಂದರೆ ಸಾಕ್ಷಿ 1 ನೇ ಆರೋಪಿಯ ಮದುವೆಯಾಗುವ ಮೊದಲೇ ಅವರು ಶಿವನಿಯಲ್ಲಿ ವಾಸವಾಗಿದ್ದರು ಎನ್ನುತ್ತಾರೆ. ಆ ರೀತಿ 2 ಮತ್ತು 3 ನೇ ಆರೋಪಿತರು ಮನೆಯನ್ನು ಖಾಲಿ ಮಾಡಿಕೊಂಡು ಹೋದ ನಂತರ 1 ನೇ ಆರೋಪಿ ಮತ್ತು ಮೃತೆ ಲತಾ ಇಬ್ಬರೇ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಲತಾ ಮತ್ತು 2 ನೇ ಆರೋಪಿ ಗಲಾಟೆ ಮಾಡಿಕೊಂಡು ಜಗಳವಾಗಿದ್ದ ಬಗ್ಗೆ ಲತಾಳ ಮೇಲೆ 2 ನೇ ಆರೋಪಿ ಅಜ್ಜಂಪುರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿ ಕೋರಿಯರ್ ಕಂಪೆನಿಗೆ ಚಾಲಕನಾಗಿ ಹೋಗುತ್ತಿದ್ದನು ಎಂದರೆ ಸರಿ. ದಿನಾಂಕ 19.04.2019 ರಂದು 1 ನೇ ಆರೋಪಿ ಲತಾಳ ಮನೆಗೆ ಬಂದಿದ್ದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ 1 ನೇ ಆರೋಪಿ ಮತ್ತು ಮೃತೆ ಲತಾ ಇಬ್ಬರು ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಅದೇ ದಿನ ನಾನು ನಮ್ಮ ಮನೆಯ ಮುಂದೆ ನಿಂತುಕೊಂಡಿದ್ದಾಗ ಲತಾ ನನ್ನನ್ನು ಮಾತನಾಡಿಸಿ ಆಕೆಯ ಗಂಡನಾದ 1 ನೇ ಆರೋಪಿ ಮನೆಗೆ ಬಂದಿರುವ

ವಿಚಾರವನ್ನು ತಿಳಿಸಿರುತ್ತಾಳೆ ಎಂದರೆ ಸರಿಯಲ್ಲ. ದಿನಾಂಕ 20.04.2019 ರಂದು ಶನಿವಾರ ಬೆಳಿಗ್ಗೆ 9.00 ಗಂಟೆ ಸುಮಾರಿಗೆ ಲತಾಳ ಮನೆಯ ಮುಂದೆ ಜನ ಸೇರಿದ್ದನ್ನು ನೋಡಿ ನಾನು ವಿಚಾರಿಸಲಾಗಿ ಲತಾಳು ಅವರ ಮನೆಯ ಮಲಗುವ ಕೋಣೆಯ ಮೇಲ್ಛಾವಣಿಗೆ ಹಾಕಿದ್ದ ಅಡಿಕೆ ಮರದ ಬೊಂಬಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ಈ ವಿಚಾರಗಳನ್ನು ಮತ್ತು ಲತಾ ಮತ್ತು 1 ನೇ ಆರೋಪಿಯ ಮಧ್ಯೆ ಏನೋ ಗಲಾಟೆಯಾಗಿ ಅಥವಾ ಆಕೆಯ ಅತ್ತೆ ಮಾವ ಮತ್ತು ಆಕೆಯ ನಡುವೆ ಆಗಿದ್ದ ಮನಸ್ತಾಪದಿಂದ ಅವರ ಹಿಂಸೆಯನ್ನು ತಾಳಲಾರದೇ ಲತಾ ನೇಣು ಹಾಕಿಕೊಂಡಿರಬಹುದು ಅಥವಾ 1 ನೇ ಆರೋಪಿ ರಾತ್ರಿ ಲತಾಳೊಂದಿಗೆ ಗಲಾಟೆ ಮಾಡಿಕೊಂಡು ಅವರಿಬ್ಬರ ನಡುವೆ ಏನೋ ಅಚಾತುರ್ಯ ಆಗಿರಬಹುದೆಂದು ತಿಳಿಸಿ ದಿನಾಂಕ 21.04.2019 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.31 ಎಂದು ಗುರುತಿಸಲಾಯಿತು.

6. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನೀವು ಪೊಲೀಸರಿಗೆ ನಿಪಿ.31 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿತರು ನಿಮ್ಮ ಊರಿನವರಾಗಿರುವ ಕಾರಣ ಅವರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ಆರೋಪಿತರ ಪರ ವಕೀಲರಿಂದಃ</u>

7. ಪೊಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಮ್ಮನ್ನು ವಿಚಾರಿಸಿಲ್ಲ ಎಂದರೆ ಸರಿ. 3 ವರ್ಷಗಳ ಹಿಂದೆ ನನ್ನ ವಯಸ್ಸು 31 ಎಂದು ನಾನು ಯಾರಿಗೂ ತಿಳಿಸಿಲ್ಲ. ನಿಪಿ.2 ರಿಂದ 5 ಮತ್ತು 9 ಮತ್ತು 10 ಫೋಟೋಗಳಲ್ಲಿರುವ ಮೃತ ದೇಹ ಲತಾಳದ್ದು ಎಂದು ಗುರುತಿಸಿ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.